Literacy for a Billion

Movie: Shravana Sanje
Year: 1995

Song: Henne Nee Alabeda
Lyricist: R N Jayagopal

ಹೆಣ್ಣೇ ನೀ ಅಳಬೇಡ..
ಫಲವಿಲ್ಲ ಕಣ್ಣೀರಿಂದ..
ಮರೆತು ಮನದ ನೋವ
ನೀ ಎದುರಿಸು ಛಲದಿಂದ
ಹೊಸ ಹೆಜ್ಜೆಯ ಹಾಕು ಮುಂದೆ..
ಅದೋ ಕಂಡಿದೆ ನೂತನ ಉದಯ
ಹೊಸ ಬಾಳಿಗೆ ನೀಡಿದೆ ಕರೆಯ
ಹದ ಮಾಡಿಕೊ ನಿನ ಹೃದಯ
ಹೆಣ್ಣೇ ನೀ ಅಳಬೇಡ..
ಫಲವಿಲ್ಲ ಕಣ್ಣೀರಿಂದ..

ಅರಳೋ ಮುನ ಆಸೆ ಹೂವು
ಬಂದಿತಲ್ಲ ಇಂಥ ನೋವು
ಅಳಿಸಿದ್ದೇಕೆ ಈ ಹಣೆ ಸಿಂಧೂರ..
ವೀಣೆ ತಂತಿ ಕಿತ್ತರೇನು
ಹೊಸದು ತಂತಿ ಹಾಕು ನೀನು
ಮೀಟು ಅಲ್ಲಿ ನೂತನ ಝೇಂಕಾರ..
ಆಡೋ ಸಮಾಜ ಸಾಕೋಲ್ಲ
ಕಷ್ಟಕೆ ಯಾರೂ ಆಗೋಲ್ಲ
ದುರ್ಗತಿ ನಿಂಗಿರೆ ಸುತ್ತೆಲ್ಲ
ನಿನ ಕಾಯುವರಾರಿಲ್ಲ
ಕುಂಕುಮವೆಂದೂ ನಿನಯ ಹಕ್ಕು
ತಾಯಿಯು ಕೊಟ್ಟ ಸಿಂಗಾರ
ಮಾಡು ನೀ ನಿರ್ಧಾರ...
ಅದೋ ಕಂಡಿದೆ ನೂತನ ಉದಯ

ಹೊಸ ಬಾಳಿಗೆ ನೀಡಿದೆ ಕರೆಯ
ಹದ ಮಾಡಿಕೊ ನಿನ ಹೃದಯ
ಹೆಣ್ಣೇ ನೀ ಅಳಬೇಡ..
ಫಲವಿಲ್ಲ ಕಣ್ಣೀರಿಂದ..

ಬಿಳಿ ವಸ್ತ್ರ ಶವದ ಹೊದಿಕೆ
ಬಿಳಿ ಸೀರೆ ನಿನಗೆ ಏಕೆ
ಜೀವಂತ ಶವದಂತೆ ಇರಬೇಕೇ..
ಈ ಪಂಜರವ ಒಡೀಬೇಕು
ಬಣ್ಣದ ಬಾಳಿಗೆ ಬರಬೇಕು
ಆಡುವ ಬಾಯಿಗೆ ನೀ ಬೀಗ
ಧೈರ್ಯದೆ ಇಂದು ನೀ ಹಾಕು
ಅಬಲೆ ಹೆಣ್ಣು ಆದರೆ ವಿಧವೆ
ಆಗಲೇ ಬೇಕು ಮರುಮದುವೆ
ಮಾಡು ನೀ ನಿರ್ಧಾರ..
ಅದೋ ಕಂಡಿದೆ ನೂತನ ಉದಯ
ಹೊಸ ಬಾಳಿಗೆ ನೀಡಿದೆ ಕರೆಯ
ಹದ ಮಾಡಿಕೊ ನಿನ ಹೃದಯ
ಹೆಣ್ಣೇ ನೀ ಅಳಬೇಡ..
ಫಲವಿಲ್ಲ ಕಣ್ಣೀರಿಂದ..
ಮರೆತು ಮನದ ನೋವ
ನೀ ಎದುರಿಸು ಛಲದಿಂದ
ಹೊಸ ಹೆಜ್ಜೆಯ ಹಾಕು ಮುಂದೆ..
ಅದೋ ಕಂಡಿದೆ ನೂತನ ಉದಯ
ಹೊಸ ಬಾಳಿಗೆ ನೀಡಿದೆ ಕರೆಯ

ಹದ ಮಾಡಿಕೊ ನಿನ ಹೃದಯ ಫಲವಿಲ್ಲ ಕಣ್ಣೀರಿಂದ..
ಹೆಣ್ಣೇ ನೀ ಅಳಬೇಡ..

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.